ಏನು ಮಾಡಬೇಕೋ ತೋಚಲಿಲ್ಲ ಬೊಂದಯನಿಗೆ. ಕೂಡಲೇ ಒಳಗೆ ಹೋಗಿ ಆಕೆಯನ್ನು ಕಾರು ಹತ್ತಿಸಿ, 'ನಾನು ಕರೆದುಕೊಂಡು ಹೋಗುತ್ತೇನೆ...' ಎಂದನು. ಎಲ್ಲರೂ ಭಯದಿಂದ ಅವನತ್ತ ನೋಡಿದರು. ಮತ್ತೊಮ್ಮೆ ಅದೇ ಮಾತು ಹೇಳಿ ಕಾರಿನ ಬಳಿ ಓಡಿಬಂದನು.

'ಏಯ್... ಇಷ್ಟು ಹೊತ್ತು ಏನು ಮಾಡುತ್ತಿದ್ದೆ... ನಡಿಯೋ... ಹೋಗೋಣ...' ಬಾಲಯ್ಯ ಕೋಪದಿಂದ ಹೊರಗೆ ನೋಡುತ್ತ ಹೇಳಿದನು.

'ಕಾಕಾ... ಯಾರೋ ಹೆಂಗಸು ಆಪತ್ತಿನಲ್ಲಿದ್ದಾಳೆ... ನಾನು ಬೇಗ ಹೋಗಿ ಎಲ್ಲರೆಡ್ಡಪೇಟೆ ಆಸ್ಪತ್ರೆಗೆ ಬಿಟ್ಟುಬರುತ್ತೇನೆ... ತುಂಬಾ ಹೊತ್ತೇನಿಲ್ಲ, ಅರ್ಧ ಗಂಟೆ ಅಷ್ಟೇ... ನೀನೂ ನನ್ನ ಜೊತೆಯೇ ಬಾ...' ಪಕ್ಕಕ್ಕೆ ಬಂದು ಹೇಳಿದನು ಬೊಂದಯ.

ಹುಚ್ಚನನ್ನು ನೋಡುವಂತೆ ನೋಡಿದನು ಬಾಲಯ್ಯ. 'ನಿನಗೇನು ಬುದ್ಧಿ ಇದೆಯಾ ಇಲ್ಲವಾ... ದೊರೆಯ ವಿಷಯ ನಿನಗೆ ಗೊತ್ತಿಲ್ಲ. ಸಾಯಿಸಿಬಿಡುತ್ತಾನಷ್ಟೆ... ಬಾಯಿ ಮುಚ್ಚಿಕೊಂಡು ನಡಿ... ಅವರು ಯಾರಂದುಕೊಂಡಿದ್ದೀಯ...' ಹೆದರಿಸಿದನು.

ಬೊಂದಯ ಕೇಳಿಕೊಳ್ಳುವಂತೆ ಬಾಲಯ್ಯನ ಕೆನ್ನೆ ಹಿಡಿದುಕೊಂಡು, 'ಯಾರಾದರೆ ಏನು ಕಾಕಾ ಮನುಷ್ಯರೇ ಅಲ್ಲವಾ... ಆಪತ್ತು ಯಾರಿಗಾದರೂ ಒಂದೇ ಅಲ್ಲವಾ... ಆಸ್ಪತ್ರೆಗೆ ಹೋಗದಿದ್ದರೆ ಎರಡು ಪ್ರಾಣಗಳು ಹೋಗುತ್ತವೆ...' ಎಂದನು.

'ಹೋದರೆ ಹೋಗಲಿ... ಯಾರದೋ ಪಿಂಡ... ಇನ್ನಾರಿಗೋ ಗಂಡಾಂತರ... ನಿನಗೆ ಪ್ರಾಣದ ಮೇಲೆ ಆಸೆಯಿಲ್ಲವಾ... ನಡಿ...' ಎಂದನು.

ಅಷ್ಟುಹೊತ್ತಿಗೆ ಪೂರ್ತಿ ನೆನೆದಿದ್ದನು ಬೊಂದಯ. ನೆತ್ತಿಯಿಂದ ನೀರು ತೊಟ್ಟಿಕ್ಕುತ್ತಿದೆ. 'ಕಾಕಾ... ನಾವೇ ಆಗಿದ್ದರೆ ಮನೆ ಮುಂದೆ ನಿಂತ ಕಾರನ್ನು ನೋಡಿ ಸ್ವಲ್ಪ ಬರುತ್ತೀರಾ ಎಂದು ಕೇಳುತ್ತಿದ್ದೆವು. ಪಾಪ... ಇಷ್ಟು ಆಪತ್ತಿನಲ್ಲಿಯೂ ಅವರು ತಮ್ಮ ಕೆಲಸ ತಾವೇ ನೋಡಿಕೊಳ್ಳುತ್ತಿದ್ದಾರೇ ವಿನಃ ನಮ್ಮನ್ನು ಕೇಳುತ್ತಿದ್ದಾರಾ... ಅಮಾಯಕರು. ಅವರ ಕಡೆಯಿಂದ ನಾವೇ ಯೋಚಿಸಬೇಕು...' ಒಪ್ಪಿಸಲು ಮತ್ತೆ ಗಲ್ಲ ಹಿಡಿದುಕೊಂಡು ಕೇಳಿಕೊಂಡನು.

ಅವನ ಕೈಯನ್ನು ಬೀಸಿ ತಳ್ಳುತ್ತ, 'ಏಯ್... ದೊರೆಸಾನಿಗೆ ಲೇಟಾಗುತ್ತದೆ ಕಣೋ ಹುಚ್ಚಾ... ದೊರೆ ಹೇಳಿದ್ದು ಕೇಳಿದೆಯಲ್ಲವಾ...' ಎಂದನು.

ಬೊಂದಯ ಕೇಳಿಸಿಕೊಳ್ಳಲಿಲ್ಲ. 'ಒಂದು ಅರ್ಧ ಗಂಟೆ, ಒಂದು ಗಂಟೆ ತಡವಾದರೆ ಏನಾಗುತ್ತದೆ ಕಾಕಾ... ಪ್ರಾಣಗಳೇನೂ ಹೋಗುವುದಿಲ್ಲವಲ್ಲವಾ... ಇಲ್ಲಿ ಪ್ರಾಣಗಳೇ ಹೋಗುತ್ತಿವೆ... ನಮ್ಮ ಅಕ್ಕನೋ ತಂಗಿಯೋ ಆಗಿದ್ದರೆ ಹೀಗೇ ಸುಮ್ಮನಿರುತ್ತಿದ್ದೆವಾ...' ಎನ್ನುತ್ತ ಹಿಂದಿನ ಬಾಗಿಲು ತೆರೆದ. ಆತನ ನಿರ್ಧಾರ ಬಾಲಯ್ಯನಿಗೆ ಅರ್ಥವಾಯಿತು. ಜೋರಾಗಿ, 'ನಿನಗೆ ಮರ್ಯಾದೆಯಿಂದ ಹೇಳಿದರೆ ಕೇಳಕ್ಕೆ ಆಗುವುದಿಲ್ಲವಾ... ಒದ್ದರೆ ಸರಿಹೋಗುತ್ತೀಯ... ಮುಠ್ಠಾಳ... ಬರುತ್ತೀಯಾ ಇಲ್ಲವಾ' ಎನ್ನುತ್ತ ಕಾರು ಇಳಿದು ಕೈಯೆತ್ತಿದ.

ಬೊಂದಯನಿಗೆ ಸಹನೆ ಮೀರಿತು. ಕೇಳಿಕೊಂಡರೆ ಒಪ್ಪುವುದಿಲ್ಲವೆಂದು ಗೊತ್ತಾಗಿಹೋಯಿತು. ಎತ್ತಿದ ಕೈಯನ್ನು ಹಾಗೇ ಹಿಡಿದು ಬೀಸಿ ತಳ್ಳುತ್ತ, 'ಏಯ್... ಬಾಲುಗಾ... ಎಷ್ಟುಹೊತ್ತೂ, ದೊರೆ, ದೊರೆಸಾನಿ ಎಂದು ಬಿಟ್ಟರೆ ಒಬ್ಬ ಮನುಷ್ಯನಂತೆ ಯೋಚಿಸಲಾರೆಯಾ... ಒಂದು ಗಂಟೆಯಲ್ಲಿ ಬರುತ್ತೇನೆಂದೆನಲ್ಲವಾ... ಸ್ವಲ್ಪ ಲೇಟಾದರೆ ಯಾರಿಗೇನಾಗುತ್ತದೆಯೋ. ಅಲ್ಲಿ ಪ್ರಾಣ ಹೋದರೂ ಲೆಕ್ಕವಿಲ್ಲವಾ... ನನ್ನ ಜೊತೆಗೇ ಬಂದು... ನನ್ನ ಮೇಲೇ ಕೈ ಮಾಡುತ್ತೀಯ...' ಎಂದನು ಜೋರಾಗಿ ಕೂಗಾಡುತ್ತ. ಆ ಕಿರುಚಾಟಕ್ಕೆ ಒಮ್ಮೆಗೇ ಬೆಚ್ಚಿದನು ಬಾಲಯ್ಯ. ಕಣ್ಣು ಕೆಂಪಗೆ ಮಾಡಿಕೊಂಡು, 'ದೊರೆಸಾನಿಗೇ ಅಷ್ಟೆಲ್ಲ ಅನ್ನುತ್ತೀಯೇನೋ... ಎಷ್ಟು ಕೊಬ್ಬು ನಿನಗೆ... ತಾಳು ನಿನ್ನ ಕತೆ